ಹಿಡಿದು ಹೋಗುತ್ತಿದ್ದೆವು. ಅಟ್ಟದಲ್ಲೋ, ಹಳೆ ಸಾಮಾನುಗಳ ಜೊತೆಯಲ್ಲೋ ಸೇರಿಹೋಗಿರುತ್ತಿದ್ದ ಕೊಡೆಗಳನ್ನು ಮಳೆಗಾಲ ಶುರುವಾದ ಕೂಡಲೇ ಹುಡುಕಿ ತೆಗೆದಿರಿಸಿಕೊಳ್ಳುತ್ತಿದ್ದೆವು. ಅದರ ಕಡ್ಡಿಗಳು ಮುರಿದಿದ್ದರೆ, ಬಟ್ಟೆ ಹರಿದಿದ್ದರೆ ತೇಪೆ ಹಾಕಿಸಲು ಕೊಡೆ ರಿಪೇರಿಯವನ ಬಳಿ ಕೊಟ್ಟು ಸರಿ ಮಾಡಿಸಿಕೊಳ್ಳುತ್ತಿದ್ದೆವು. ಊರಲ್ಲಿ ಕೊಡೆ ರಿಪೇರಿಯವರಿಗೆ ಮಳೆಗಾಲದಲ್ಲಿ ಕೈತುಂಬಾ ಕೆಲಸ. ಕೊಡೆ ಕಳೆದುಹೋಗಬಾರದೆಂದು ನಮ್ಮ ಹೆಸರನ್ನು ಕೊಡೆಯ ಬಟ್ಟೆಯ ಮೇಲೆ ಪೈಂಟ್‌ನಿಂದಲೋ, ಹೊಲಿಗೆ ಹಾಕಿಯೋ ಜೋಪಾನ ಮಾಡಿಕೊಳ್ಳುತ್ತಿದ್ದೆವು. ಸ್ಟೀಲ್ ಹಿಡಿಕೆಯ ಮೇಲೂ ಹೆಸರನ್ನು ಕೆತ್ತಿಸುತ್ತಿದ್ದೆವು. ಶಾಲೆ ಬಿಟ್ಟೊಡನೆ ಒಟ್ಟಾಗಿ ಮನೆಗೆ ಬರುತ್ತಿದ್ದ ಸ್ನೇಹಿತೆಯರ ಕೊಡೆಗಳ ಮೇಲೆ ಗುನ್ನ ಹಾಕುತ್ತಾ, ಅವರಿಂದ ತಪ್ಪಿಸಿಕೊಳ್ಳುತ್ತಾ ಮನೆಗೆ ಬರುತ್ತಿದ್ದೆವು.

ಮಲೆನಾಡಿನ ಧಾರಾಕಾರವಾಗಿ ಸುರಿಯುವ 'ಜಿಟಿಜಿಟಿ' ಮಳೆಯಲ್ಲಿ ಶಾಲೆಗೆ ಹೋಗುತ್ತಿದ್ದುದು ಒಂದು ಅನಿರ್ವಚನೀಯ ಅನುಭವವೇ ಸರಿ. ಮಳೆಯಿಂದಾಗಿ ರಸ್ತೆಯಲ್ಲಿ ಉಂಟಾಗಿರುತ್ತಿದ್ದ ಚಿಕ್ಕ ತೊರೆಯಲ್ಲಿ ಕಾಲಾಡಿಸುತ್ತಾ, ಹಾಕಿರುತ್ತಿದ್ದ ಹವಾಯ್ ಚಪ್ಪಲಿಯಿಂದ ಹಿಂಬದಿ ಲಂಗದ ಮೇಲೆ ಕೆಸರು ಹಾರಿಸಿಕೊಳ್ಳುತ್ತಾ, 'ಜರಜರ' ಶಬ್ದದೊಂದಿಗೆ ಒಂದು ಕೈಯಲ್ಲಿ ಕೊಡೆ, ಬಗಲಿಗೆ ಸ್ಲೇಟು–ಪುಸ್ತಕಗಳ ಚೀಲ ಹಾಕಿಕೊಂಡೋ ಅಥವಾ ಅಲ್ಯೂಮಿನಿಯಂನ ಪುಟ್ಟ ಟ್ರಂಕು ಹಿಡಿದೋ ಮಳೆಯಲ್ಲಿ ಹೊರಟರೆ ಮನೆಯಿಂದ ಶಾಲೆಗೆ ಹೋಗುವಷ್ಟರಲ್ಲಿ ನೆನೆದು ತೊಪ್ಪೆಯಾಗಿಬಿಡುತ್ತಿದ್ದೆವು! ಸ್ಲೇಟಿನಲ್ಲಿ ಬರೆದ ಮಗ್ಗಿ, ಕಾಗುಣಿತ, ಪಾಠ ಮಳೆನೀರು ಬಿದ್ದು ಅಳಿಸಿಹೋಗುತ್ತದೆಂದು ಬಗಲಲ್ಲಿರುವ ಚೀಲವನ್ನು ಲಂಗದಲ್ಲಿ ಮುಚ್ಚಿ ನಡೆಯುವುದೊಂದು ಹರಸಾಹಸ. ಶಾಲೆಯಲ್ಲಿ ನಮಗೆ ಕುಳಿತುಕೊಳ್ಳಲು ಬೆಂಚು, ಡೆಸ್ಕ್ ಇರುತ್ತಿರಲಿಲ್ಲ. ಹಸೆಮಣೆಯಂತಿರುವ ಉದ್ದುದ್ದದ ಮಣೆಯನ್ನು ಹಾಕಿರುತ್ತಿದ್ದರು. ಮಳೆಗಾಲದಲ್ಲಿ ಬಟ್ಟೆ ಒದ್ದೆಯಾಗಿರುವ ಮಕ್ಕಳಿಗೆ ಮಣೆಯ ಮೇಲೆ ಕುಳಿತುಕೊಳ್ಳಲು ಕಷ್ಟವಾಗುತ್ತದೆಂದು ತರಗತಿಯ ಹಿಂಭಾಗದಲ್ಲಿ ಬೆಂಚನ್ನು ಹಾಕಿರುತ್ತಿದ್ದರು. ಬೆಂಚಿನ ಮೇಲೆ ಕುಳಿತುಕೊಳ್ಳುವ ಆಸೆಯಿಂದ ಶಾಲೆಗೆ ಬರುವಾಗ ಬೇಕೆಂದೇ ಲಂಗವನ್ನು ಮಳೆಗೆ ಹಿಡಿದು ಒದ್ದೆ ಮಾಡಿಕೊಳ್ಳುತ್ತಿದ್ದೆವು. ಕವಿ ಸಾಲನ್ನು ಅನುಕರಿಸಿ ಹಿಂದಿನ ಸಾಲಿನ ಹುಡುಗಿಯರೆಂದರೆ ನಮಗೇನೇನೂ ಭಯವಿಲ್ಲ ಎಂಬಂತೆ ತರಗತಿಯಲ್ಲಿ ಗತ್ತಿನಿಂದ ಬೆಂಚಿನ ಮೇಲೆ ಕುಳಿತುಕೊಳ್ಳುತ್ತಿದ್ದೆವು.

ಪ್ರತಿ ಮಳೆಗಾಲದಲ್ಲೂ 'ಗಂಗಾ ಸ್ನಾನ, ತುಂಗಾ ಪಾನ' ಎಂಬುದಕ್ಕೆ ವ್ಯತಿರಿಕ್ತವಾಗಿ ಸ್ವಚ್ಛ ಸ್ಫಟಿಕದ ವರ್ಣದಿಂದ ಮಣ್ಣಿನ ಕೆಂಪು ವರ್ಣಕ್ಕೆ ತಿರುಗಿದ ತುಂಗೆಯು ಪ್ರವಾಹವನ್ನುಕ್ಕಿಸುತ್ತಾ ಬರುತ್ತಿದ್ದಳು. ಮಠದಲ್ಲಿ ಹೊಳೆ ಮೆಟ್ಟಿಲುಗಳು ತುಂಬಿ ಸಂಧ್ಯಾವಂದನೆ ಮಂಟಪದವರೆಗೂ ಏರಿ ಹರಿಯುತ್ತಿದ್ದಳು ತುಂಗೆ. ಊರಿನಲ್ಲಿ ತುಂಗೆಗೆ ಹೊಂದಿಕೊಂಡಿದ್ದ ಗಾಂಧಿಮೈದಾನದಲ್ಲಿಯೂ ತುಂಗೆಯ ಕೆಸರು ನೀರಿನ ಪ್ರವಾಹ! ಪ್ರವಾಹದ ರಭಸಕ್ಕೆ ತೇಲಿ ದಡದೆಡೆಗೆ ಬರುತ್ತಿದ್ದ ಮರದ ಸೌದೆ–ಕುಂಟೆಗಳನ್ನು ಒಂದಷ್ಟು ಜನ ಹಿಡಿದು ಕೂಡಿಟ್ಟುಕೊಳ್ಳುತ್ತಿದ್ದುದೂ ಉಂಟು. ಕೆಲವೊಮ್ಮೆ ಪ್ರಾಣಿಗಳೂ ನದಿಯ ಮಧ್ಯೆ ತೇಲಿ ಬರುತ್ತಿದ್ದವು. ತುಂಗೆಯ ರಭಸಕ್ಕೆ ಹೆದರಿ ಜನ ಅವುಗಳನ್ನು ರಕ್ಷಿಸಲಾರದೆ ಅಸಹಾಯಕತೆಯಿಂದ ನೋಡುತ್ತಾ ನಿಲ್ಲುತ್ತಿದ್ದರು. ಒಮ್ಮೆಯಂತೂ ದೋಣಿಯಲ್ಲಿ ಕುಳಿತು ಜನ ಹೊಳೆ ದಾಟುತ್ತಿರುವಾಗ ದೋಣಿ ಮುಗುಚಿಬಿದ್ದು ಅವರಲ್ಲಿ ಒಂದಿಬ್ಬರು ಪ್ರವಾಹಕ್ಕೆ ಸಿಲುಕಿ ಸಾವನ್ನಪ್ಪಿದರು. ಕೆಲವರ ಗದ್ದೆಗಳಲ್ಲಿ ಭತ್ತದ ನೆಟ್ಟಿಗೆ ಕಿತ್ತಿಟ್ಟಿದ್ದ ಸಸಿಗಳು, ನೆಟ್ಟಿಯಾಗಿ ಒಂದೆರಡು ದಿನಗಳಷ್ಟೇ ಆಗಿದ್ದ ಸಸಿಗಳು ಇವೆಲ್ಲಾ ಪ್ರವಾಹದಲ್ಲಿ ತೇಲಿ ಬರುತ್ತಿದ್ದವು. ಆ ಕೃಷಿಕರಿಗೆ ಮಳೆ ಕಡಿಮೆಯಾದೊಡನೆ ಬೇರೆಡೆಯಿಂದ ಸಸಿ ತಂದು ಪುನಃ ನೆಟ್ಟಿ ಮಾಡಬೇಕಾಗುತ್ತಿತ್ತು.

ಮಳೆಗಾಲದಲ್ಲಿ ಸಿಕ್ಕಾಪಟ್ಟೆ ಮಳೆ ಬಂತೆಂದರೆ ಆ ದಿನ ಶಾಲೆ–ಕಾಲೇಜುಗಳಿಗೆ ರಜಾ. ಹಳ್ಳಿಯವರಿಗಂತೂ ಹಳ್ಳ, ಹೊಳೆ ದಾಟಿ ಪೇಟೆಗೆ ಬರಲಾಗುತ್ತಿರಲಿಲ್ಲ. ಊರಿನಲ್ಲಿ ರಾಜಾಕಾಲುವೆಯಂತಹ ಒಂದು ಚರಂಡಿ. ಅದು ತುಂಬಿ ರಸ್ತೆಯ ಮೇಲೆ ಹರಿಯತೊಡಗಿದರೆ ಜನಸಂಚಾರಕ್ಕೆ ತೊಂದರೆ. ನಾವು ಹೋಗುವ ದಾರಿಯ ಮಧ್ಯೆ ಹಳ್ಳ ತುಂಬಿತೆಂದರೆ ಸಮೀಪದ ದಾರಿಯನ್ನು